# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಸಂಖ್ಯೆ:ಕವಿಪ್ರನಿನಿ/ಬಿ೫ಎ/1286/2014-15

ನಿಗಮ ಕಾರ್ಯಾಲಯ
ಕಾವೇರಿ ಭವನ
ಬೆಂಗಳೂರು-560009
ದಿನಾಂಕ: 25 NOV 2015

## ಸು ತ್ತೋ ಲೆ

**ವಿಷಯ:** ಮಾಹಿತಿಗಳ ಹಕ್ಕು ಅಧಿನಿಯಮ 2005 ರ ಅನ್ವಯ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿವರಗಳನ್ನು ಕಛೇರಿಯ ನಾಮಪಲಕಗಳಲ್ಲಿ ಪ್ರಕಟಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಜನ ಸ್ಪಂದನ), ಕರ್ನಾಟಕ ಸರ್ಕಾರ ರವರ ಸುತ್ತೋಲೆ ಸಂಖ್ಯೆ: ಸಿಆಸುಇ 53 ಆರ್ ಟಿ ಐ 2014 ದಿನಾಂಕ:24.03.2014.
2. ನಿಗಮದ ಅಧಿಸೂಚನೆ ಸಂಖ್ಯೆ: ಬಿ೫ಎ/14303/2010-11 ದಿನಾಂಕ: 15.05.2015 ಮತ್ತು 24.08.2015.

---

ದಿನಾಂಕ; 20.11.2015 ರಂದು ಕರ್ನಾಟಕ ಮಾಹಿತಿ ಆಯೋಗದಲ್ಲಿ ಕವಿಪ್ರನಿನಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯ ವೇಳೆಯಲ್ಲಿ ಮಾಹಿತಿಗಳ ಹಕ್ಕು ಅಧಿನಿಯಮ 2005ರ ಸೆಕ್ಷನ್ 4(1)(ಬಿ)ರ ಅನ್ವಯ ಆಯಾ ಇಲಾಖೆಯಲ್ಲಿನ ಎಲ್ಲಾ ಸಾರ್ವಜನಿಕೆ ಮಾಹಿತಿ ಅಧಿಕಾರಿಗಳು, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಮೇಲ್ಮನವಿ ಪ್ರಾಧಿಕಾರಗಳ ಹೆಸರು ಮತ್ತು ಹುದ್ದೆಗಳ ವಿವರಗಳನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಕಛೇರಿಗಳ ಮುಂಭಾಗದ ಸೂಚನಾಪಲಕದಲ್ಲಿ ಪ್ರಕಟಿಸಲು ಸೂಚಿಸಿದ್ದರೂ ಸಹ, ಹಲವು ಇಲಾಖೆಗಳಲ್ಲಿ ಕ್ರಮವನ್ನು ಜರುಗಿಸದೇ ಇರುವುದನ್ನು ಆಯೋಗವು ಗಂಭೀರವಾಗಿ ಪರಿಗಣಿಸಿತು.

ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಮತ್ತು ಮೇಲ್ಮನವಿ ಪ್ರಾಧಿಕಾರಗಳ ಹೆಸರು ಮತ್ತು ಹುದ್ದೆಗಳ ವಿವರಗಳನ್ನು ಸಂಬಂಧಿಸಿದ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಕಛೇರಿಗಳ ಮುಂಭಾಗದ ಸೂಚನಾಪಲಕದಲ್ಲಿ ಪ್ರಕಟಿಸಲು ಮತ್ತು ಅಧಿಕಾರಿಗಳು ಬದಲಾವಣೆಯಾದ ಸಂದರ್ಭದಲ್ಲಿ ಕೂಡಲೇ ಪರಿಷ್ಕರಿಸಲು ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಿದ ಸರ್ಕಾರದ ಉಲ್ಲೇಖದ ಸುತ್ತೋಲೆಯನ್ನು ಕವಿಪ್ರನಿನಿಯ ವೆಬ್‌ಸೈಟ್‌ನಲ್ಲಿ ಪಾಲನೆಗಾಗಿ ಪ್ರಕಟಿಸಿದೆ. ಆದ್ದರಿಂದ, ಮಾಹಿತಿಗಳ ಹಕ್ಕು ಅಧಿನಿಯಮ 2005 ರ ಅನ್ವಯ ನಿಗಮವು ಉಲ್ಲೇಖ-2 ರ ಅಧಿಸೂಚನೆಗಳಲ್ಲಿ ನೇಮಿಸಿದ ಎಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ತಮ್ಮ ಕಛೇರಿಯ

ಮುಂಭಾಗದ ನಾಮಪಲಕಗಳಲ್ಲಿ ಮೇಲೆ ತಿಳಿಸಿದ ವಿವರಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ ಅನುಬಂಧದಲ್ಲಿ ತಿಳಿಸಿದ ಮಾದರಿಯಲ್ಲಿ ಪ್ರಕಟಿಸಲು ಸೂಚಿಸಿದೆ.

ಮೇಲಿನ ಸೂಚನೆಗಳಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಗಳು ವಿವರಗಳನ್ನು ತಮ್ಮ ಕಛೇರಿಯ ಮುಂಭಾಗದ ನಾಮಪಲಕಗಳಲ್ಲಿ ಪ್ರಕಟಿಸಿರುವುದನ್ನು ಸಂಬಂಧಿಸಿದ ಮೇಲಾಧಿಕಾರಿಗಳು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಕ್ರಮಗಳನ್ನು ಜರುಗಿಸದ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ವಿರುದ್ಧ ಸೂಕ್ತ ಶಿಸ್ತುಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

**ನಿರ್ದೇಶಕರು[ಆಡಳಿತ ಮತ್ತು ಮಾ.ಸಂ.]**
**ಕವಿಪ್ರನಿನಿ**

<u>ಪ್ರತಿಗಳು:</u>

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಎಸ್ಕಾಂ.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂ/ ನಿರ್ದೇಶಕರು (ಹಣಕಾಸು), ಬೆವಿಸಕಂ.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/(ಹಣಕಾಸು)/(ಆ. ಮತ್ತು ಮಾ.ಸಂ.)/ ನಿರ್ದೇಶಕರು ಮತ್ತು ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಇವರುಗಳ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

<u>ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.</u>

6. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ, ಕವಿಪ್ರನಿನಿ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ.
8. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ.
9. ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

<u>ಪ್ರತಿಗಳು ಮಾಹಿತಿಗಾಗಿ:</u>

1. ಶ್ರೀ.ನಾಗರಾಜ್, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ & ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು ಬೆಂಗಳೂರು.
2. ಶ್ರೀ.ಎ.ಎನ್.ಜಯರಾಜ್, ಅಧ್ಯಕ್ಷರು, ಕವಿಮಂ ಇಂಜಿನಿಯರುಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕ.ವಿ.ಪ್ರ.ನಿ.ನಿ./ಎಸ್ಕಾಂ ಪ.ಜಾ./ಪ. ಪಂ.ಅಧಿಕಾರಿಗಳ ಸಂಘ, ಬೆಂಗಳೂರು

ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ೭ಎ/1286/2014-15 ದಿನಾಂಕ:25.11.2015ರ ಅನುಬಂಧ

# <u>ಮಾಹಿತಿ ಹಕ್ಕು ಕಾಯಿದೆ-2005</u>

## ಕವಿಪ್ರನಿನಿ ನಿಗಮ ಕಾರ್ಯಾಲಯ, ಕಾವೇರಿ ಭವನ, ಬೆಂಗಳೂರು.

**ವಿಷಯ:** ನಿಗಮ ಕಾರ್ಯಾಲಯದ ಆಡಳಿತ ಮತ್ತು ಸಿಬ್ಬಂದಿ ವಿಷಯಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರದ ವಿವರಗಳ ಪ್ರಕಟಣೆ.

| ಪ್ರಾಧಿಕಾರದ ಹೆಸರು | ಪ್ರಾಧಿಕಾರದ ವಿವರಗಳು |
|---|---|
| ಸಾರ್ವಜನಿಕ ಮಾಹಿತಿ ಅಧಿಕಾರಿ | <u>ಶ್ರೀ.ಎನ್.ವಿ.ಭುವನೇಶ್ವರಯ್ಯ</u>.<br>ಉಪ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ),<br>ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು-560 009.<br>ಕಛೇರಿ ದೂರವಾಣಿ ಸಂಖ್ಯೆ: 080-22241368 |
| ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | <u>ಶ್ರೀ.ಕೆ.ರಾಮಚಂದ್ರ ರೆಡ್ಡಿ</u>,<br>ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆಡಳಿತ)<br>ಕಛೇರಿ ದೂರವಾಣಿ ಸಂಖ್ಯೆ: 080-22216207<br><br><u>ಶ್ರೀ.ಎಸ್.ವಿ.ಗೋಪಿನಾಥ್</u>,<br>ಸಹಾಯಕ ಪ್ರಧಾನ ವ್ಯವಸ್ಥಾಪಕರು(ಸೇವೆಗಳು)<br>ಕಛೇರಿ ದೂರವಾಣಿ ಸಂಖ್ಯೆ: 080-22211527<br>ಎಕ್ಸ್‌ಟೆನ್ಷನ್: 231<br><br><u>ಶ್ರೀ.ಬಿ.ಆರ್.ನಾಗರಾಜ್</u>,<br>ಸಹಾಯಕ ಪ್ರಧಾನ ವ್ಯವಸ್ಥಾಪಕರು(ಕಾನೂನು)(ಪ್ರಭಾರ)<br>ಕಛೇರಿ ದೂರವಾಣಿ ಸಂಖ್ಯೆ: 080-22211527<br>ಎಕ್ಸ್‌ಟೆನ್ಷನ್: 241 |
| ಮೇಲ್ಮನವಿ ಪ್ರಾಧಿಕಾರ | <u>ಶ್ರೀ.ಎಂ.ರಾಮಕೃಷ್ಣ</u>.<br>ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ),<br>ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು-560 009.<br>ಕಛೇರಿ ದೂರವಾಣಿ ಸಂಖ್ಯೆ: 22212343. |